ಸಾಕ್ಷಿಯನ್ನು ಇಂದು ದಿನಾಂಕ.24.06.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ 3 ನೇ ಆರೋಪಿ ಪರ ಬಿ.ಐ.ಎಸ. ವಕೀಲರಿಂದಃ**

ದಿ.10.10.2013 ರಂದು ನನಗೆ ವೃತ್ತ ನಿರೀಕ್ಷಕರು ಎಂ.ಬಿ.ನಗರ ಗುಲಬರ್ಗಾ ರವರು ಮೌಖಿಕವಾಗಿ ಹೇಳಿ ಕರೆಸಿರುತ್ತಾರೆ. ನನಗೆ ಕರೆಯಲು ಬಂದವರ ಹೆಸರು ಹೇಳಲು ಬರುವುದಿಲ್ಲ. ನಾನೇನು ಅವರ ಹೆಸರು ಕೇಳಲು ಹೋಗಿಲ್ಲ. ಅವರು ಕರೆಯಲು ಬಂದಾಗ ನಾನು ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ನನಗೆ ಮೌಖಿಕವಾಗಿ ಕರೆ ಬಂದಿರುವ ಬಗ್ಗೆ ನಾನು ಬ್ಯಾಂಕಿನ ದಾಖಲಾತಿಗಳಲ್ಲಿ ನಮೂದು ಮಾಡಿಲ್ಲ. ನನಗೆ ಕರೆ ಬಂದ ದಿವಸ ಸಿ.ಪಿ.ಐ ರವರ ಹತ್ತಿರ ಹೊದೆ. ಆ ದಿನ ನಾನೊಬ್ಬನೆ ಹೊದನೊ ಅಥವಾ ನನ್ನ ಜೊತೆ ಬೇರೆ ಯಾರು ಇದ್ದರು ನೆನಪಿಲ್ಲ. ನಾನು ನನ್ನ ಬ್ರಾಂಚನಿಂದ ಸಿ.ಪಿ.ಐ ರವರ ಹತ್ತಿರ ಸುಮಾರು 10 ರಿಂದ 11 ಗಂಟೆ ಸಮಯದಲ್ಲಿ ಹೋಗಿದ್ದೆ. ನಾನು ಸಿ.ಪಿ.ಐ ರವರ ಹತ್ತಿರ ಹೋಗುವಾಗ ಸಂಬಂದಫಟ್ಟ ದಾಖಲಾತಿಗಳೇನನ್ನು ತೆಗೆದುಕೊಂಡು ಹೋಗಿಲ್ಲ. ಅಲ್ಲಿ ನನಗೆ ಸಿ.ಪಿ.ಐ ರವರು ಕಬ್ಬಿಣದ ರಾಡು, ಕೊಯತಾ, ಸಿ.ಸಿ.ಟಿವಿ ಕ್ಯಾಮರಾದ ಒಡೆದ ಭಾಗಗಳು, ಸೈರನ ಹಾರನ, ಗೊಡೆ ಒಡೆದ ಸೀಮೆಂಟ ಚೂರುಗಳನ್ನು ತೋರಿಸಿದರು. ಸಿ,ಪಿ.ಐ ರವರ ಕಛೇರಿಯಲ್ಲಿ ಸದರಿ ಐಟಂಗಳನ್ನು ನನಗೆ ತೋರಿಸಿಲ್ಲ ಅಂತಹ ಯಾವುದೇ ಐಟಂಗಳು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಈ ವಸ್ತುಗಳನ್ನು ಬಿಟ್ಟು ನನಗೆ ಬೇರೆ ಯಾವುದೇ ಐಟಂಗಳನ್ನು ತೋರಿಸಿಲ್ಲ ಎಂದರೆ ಸರಿ. ನಾನು ಸುಮಾರು 2-3 ಗಂಟೆಗಳ ಕಾಲ ಸದರಿ ಕಛೇರಿಯಲ್ಲಿ ಇದ್ದೆ.

ನಾನು ನನ್ನ ಮೇಲಾಧಿಕಾರಿಗಳಿಗೆ ಸಿ.ಪಿ.ಐ ಕಛೇರಿಗೆ ಹೋಗುವ ಬಗ್ಗೆ ತಿಳಿಸಿದ್ದೆ. ನಾನು ಸಂಬಂದಪಟ್ಟ ಮೇಲಾಧಿಕಾರಿಗಳಿಗೆ ಈ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಂತರ ನಾನು ನನ್ನ ಬ್ರಾಂಚಿಗೆ ಬಂದೆ ಸಮಯ ಹೇಳಲು ಬರುವುದಿಲ್ಲ. ನಾನು ಕಾರಿನಲ್ಲಿ ಸಿ.ಪಿ.ಐ ಕಛೇರಿಗೆ ಹೋಗಿದ್ದೆ ಆ ದಿನ ಯಾವ ನಂಬರ ಕಾರಿನಲ್ಲಿ ಹೋಗಿದ್ದೆ ಮತ್ತು ಅದರ ಚಾಲಕ ಯಾರು ಎಂದು ನೆನಪಿಲ್ಲ. ಆ ದಿನ ಸಿ.ಪಿ.ಐ ಕಛೇರಿಯಲ್ಲಿ ಪೋಲಿಸ ಪೇದೆಗಳನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಆರೋಪಿಗಳು ನರೋಣಾ ಪೋಲಿಸ ಠಾಣೆಯ ಪೋಲಿಸ ಪೇದೆಗಳು ಸಹ ಇದ್ದರು ಎಂದು ನುಡಿಯುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಮೈನುದ್ದೀನ, ರುಕ್ಮುದ್ದಿನ, ಸಿದ್ದು ಅಲಿಯಾಸ ರೇವಣಸಿದ್ದ, ಅಬ್ದುಲಖಾದರ ರವರು ಇದ್ದರು. ಆ ದಿವಸ ಸಿ.ಪಿ.ಐ ಕಛೇರಿಯಲ್ಲಿ ಯಾರ ಸಹ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬಾಯಿಪಾಠ ಮಾಡಿಕೊಂಡು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರ ಇರುವ ಆರೋಪಿಗಳಲ್ಲಿ ಅಬ್ದುಲಖಾದರ ಇಲ್ಲ. (2 ನೇ ಆರೋಪಿ ಮೈನುದ್ದಿನನ್ನು ಪ್ರತ್ಯಕಿಸಿ ಸಾಕ್ಷಿಗೆ ತೋರಿಸಿ ಆತನ ಹೆಸರು ಕೇಳಿದಾಗ) ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಆ ದಿನ ಸಿ.ಪಿ.ಐ ರವರ

ಕಛೇರಿಯಲ್ಲಿ ನೋಡಿದ್ದು ಆತನ ಹೆಸರು ಹೇಳಲು ಬರುವುದಿಲ್ಲ. ನಾನು 5 ಗಂಟೆಗೆ ಸಿ.ಪಿ.ಐ ಕಛೇರಿ ಬಿಟ್ಟು ಎಷ್ಟು ಗಂಟೆಗೆ ಬ್ರಾಂಚಿಗೆ ಬಂದನೆಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನಾನು ಬ್ರಾಂಚನ್ನು ಬಿಟ್ಟಾಗ ಮತ್ತು ಮರಳಿ ಬಂದಾಗ ಬ್ಯಾಂಕಿನ ದಾಖಲಾತಿಗಳಲ್ಲಿ ಬಿಟ್ಟ ಮತ್ತು ಮರಳಿ ಬಂದ ಸಮಯವನ್ನು ನಮೂದು ಮಾಡಿಲ್ಲ.

ಘಟನಾ ದಿನ ಸದರಿ ಬ್ಯಾಂಕಿನಲ್ಲಿ ಆದ ಒಟ್ಟು ವ್ಯವಹಾರದ ಬಗ್ಗೆ ದಾಖಲಾತಿಯನ್ನು ನಾನು ತನಿಖಾಧಿಕಾರಿಗೆ ಸಲ್ಲಿಸಿಲ್ಲ. ನಮ್ಮ ಬ್ಯಾಂಕಿನಲ್ಲಿ ಇದ್ದ ಆಭರಣಗಳ ಪಟ್ಟಿ ಮತ್ತು ಖಾತೆದಾರರ ಪಟ್ಟಿಯನ್ನು ತನಿಖಾಧಿಕಾರಿಗೆ ಸಲ್ಲಿಸಿದ್ದೆನೆ. ತನಿಖಾಧಿಕಾರಿಗೆ ನಾವು ಯಾವುದೇ ಆಭರಣದ ಪಟ್ಟಿ ಮತ್ತು ಖಾತೆದಾರರ ಪಟ್ಟಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ ಘಟನಾ ದಿನ ನಮ್ಮ ಬ್ಯಾಂಕಿನಲ್ಲಿ ಅಷ್ಟೊಂದ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಸಿ.ಪಿ.ಐ ರವರ ಕಛೇರಿಗೆ ಹೋದಾಗ ಯಾವುದೇ ವಾಹನವನ್ನು ನಿಮಗೆ ತೋರಿಸಲಾಗಿತ್ತೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು 2 ನೇ ಬಾರಿ ಹೋದಾಗ ನನಗೆ 2 ವಾಹನವನ್ನು ತೋರಿಸಲಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಆ ಪೈಕಿ ಒಂದು ಟಾಟಾಸುಮೊ ಇತ್ತು ಇನ್ನೊಂದು ಐಷರಗೂಡ್ಸ ವೈಹಿಕಲ್ ಇತ್ತು. ಟಾಟಾಸುಮೊ ಬಿಳಿ ಬಣ್ಣದಾಗಿತ್ತು ಐಷ್ರನ ಬಣ್ಣ ನನಗೆ ನೆನಪಿಲ್ಲ. ಸದರಿ ಗಾಡಿಗಳು ಸುವ್ಯಸ್ದೆಯಲ್ಲಿ ಇದ್ದವು ಚಕ್ರಗಳು ಸಹ ಸುಸ್ಥಿತಿಯಲ್ಲಿ ಇದ್ದವು. ವಾಹನಗಳ ದಾಖಲಾತಿಗಳನ್ನು ನನಗೆ ತೋರಿಸಿಲ್ಲ. ಪೋಲಿಸರು ತೋರಿಸಿರುವ ವಾಹನಗಳನ್ನು ನೋಡಿರುತ್ತೆನೆ. ಸದರಿ ವಾಹನಗಳು ಯಾವ ದಿಕ್ಕಿಗೆ ನಿಲ್ಲಿಸಿದರು ಎಂದು ಹೇಳಿಲು ಬರುವುದಿಲ್ಲ. ನಾನು 2 ನೇ ಸಿ.ಪಿ.ಐ ರವರ ಹತ್ತಿರ ಹೋದಾಗ ನನ್ನ ಜೊತೆ ಇನ್ನೂ ಒಬ್ಬರು ಇದ್ದರು ಅವರ ಹೆಸರು ಹೇಳಲು ಬರುವುದಿಲ್ಲ. ನಾನು ಠಾಣೆಗೆ ಹೋಗಿಲ್ಲ, ಯಾವುದೇ ಗಾಡಿಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 4 ನೇ ಆರೋಪಿ ಪರ ಬಿ.ಜಿ.ಬಿ. ವಕೀಲರಿಂದಃ**

ಈ ಘಟನೆಯ ಮೊದಲು ನನಗೆ ಗೊತ್ತಿರುವ ಹಾಗೇ 2 ರಿಂದ 3 ಸಲ ನಮ್ಮ ಬ್ರಾಂಚನ ಕಳ್ಳತನವಾಗಿತ್ತು. ಈ ಮೊದಲು ಆದ ಕಳ್ಳತನವು ನನ್ನ ಮೇಲಾಧಿಕಾರಿಗಳಿಗೆ ಗೊತ್ತಿದೆ. ಆರ.ಬಿ.ಐ ಗೆ ಗೊತ್ತಿದಿಯೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಕಳ್ಳತನವಾದ ನಂತರವೂ ಸಹ ಯಾವುದೇ ಸೆಕ್ಯೂರಿಟಿ ನೀಡಿರಲಿಲ್ಲ. ನಾವು ಬಂದ ನಂತರವು ಸಹ ಯಾವುದೇ ಸೆಕ್ಯೂರಿಟಿ ಇಟ್ಟಿರಲಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳನ್ನು ಈ ದಿನವೇ ನೋಡಿರುತ್ತೆನೆ ಎಂದರೆ ಸರಿಯಲ್ಲ. ಈ ಮೊದಲು ದಿ.10.10.2013 ರಂದು ಎಂ.ಬಿ.ನಗರ ಪೋಲಿಸ ಠಾಣೆಯಲ್ಲಿ ನೋಡಿದ್ದೆ. ನಾನು ಎಂ.ಬಿ.ನಗರ ಪೋಲಿಸ ಠಾಣೆಯಲ್ಲಿ 4 ಜನರನ್ನು ನೋಡಿದ್ದೆನೆ. ಆರೋಪಿಗಳನ್ನು ನಾನು ನೋಡಿದ್ದೆನೆ ಅವರ ಹೆಸರುಗಳನ್ನು ನಿಖರವಾಗಿ ವೈಯಕ್ತಿವಾಗಿ ಹೇಳಲು ಬರುವುದಿಲ್ಲ. ನನಗೆ ಆರೋಪಿಗಳ ಹೆಸರು ಹೇಳಲು ಬರುವುದಿಲ್ಲ ಏಕೆಂದರೆ ಅವರನ್ನು ಇದೇ ಮೊದಲು ಸಲ ನೋಡುತ್ತಿದ್ದೆನೆ ಎಂದರೆ ಸರಿಯಲ್ಲ.

ನಾನು ಚಾರ್ಜಶೀಟಿನಲ್ಲಿ ಆರೋಪಿಗಳ ಹೆಸರು ನೋಡಿಕೊಂಡು ಅದನ್ನು ಬಾಯಿಪಾಠ ಮಾಡಿಕೊಂಡು ಆರೋಪಿಗಳ ಹೆಸರು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಘಟನಾ ದಿನ ಪೋಲಿಸರಿಗೆ ಫೋನ ಮೂಲಕ ತಿಳಿಸಿದೆನು ಅವರು ಸ್ಥಳಕ್ಕೆ ಬಂದಾಗ ನಾನು ದೂರನ್ನು ಸಲ್ಲಿಸಿರುತ್ತೆನೆ. ನಾನು ದೂರನ್ನು ಬ್ಯಾಂಕಿನಲ್ಲಿಯೆ ನೀಡಿರುತ್ತೆನೆ.

ಬ್ಯಾಂಕಿನಲ್ಲಿ ಜಮಾವಾಣೆ ಆದ ನೋಟುಗಳ ನಂಬರಗಳನ್ನು ನಾವು ದಾಖಲಿಸಿಕೊಳ್ಳುವುದಿಲ್ಲ ಮತ್ತು ಸ್ಕ್ಯಾನ ಸಹ ಮಾಡುವುದಿಲ್ಲ ಬಂಗಾರವನ್ನು ಸ್ಕ್ಯಾನ ಸಹ ಮಾಡುವುದಿಲ್ಲ. ಯಾವ ಮುಖ ಬೆಲೆಯ ಎಷ್ಟು ನೋಟುಗಳು ಇದ್ದವು ಎಂದು ನಮಗೆ ಈಗ ಹೇಳಲು ಬರುವುದಿಲ್ಲ ದಾಖಲೆಗಳನ್ನು ನೋಡಿ ಹೇಳಬಹುದು. ನಮ್ಮ ಪಿರ್ಯಾದಿಯಲ್ಲಿ ಅದನ್ನು ಹೇಳಿ ಬರೆಸಿಲ್ಲ ಆದರೆ ಮುಂದುವರೆದ ದಾಖಲೆಗಳಲ್ಲಿ ಠಾಣೆಗೆ ಸಲ್ಲಿಸಿದ್ದೆವೆ. ನಮ್ಮ ಬ್ಯಾಂಕನ್ನು ಕಲ್ಲಿನಿಂದ ಕಟ್ಟಲಾಗಿದೆ ಎಂದರೆ ಸರಿ ಸಾಮಾನ್ಯವಾಗಿ ಕಲ್ಲಿನಿಂದ ಕಟ್ಟಿದ ಕಟ್ಟಡಗಳ ಒಂದು ಕಲ್ಲನ್ನು ತೆಗೆದರೆ ಇನ್ನೊಂದು ಕಲ್ಲು ಉರುಳುತ್ತದೆ ಎಂದರೆ ಸರಿ. ತನಿಖೆಗೆ ಬಂದಾಗ ಪೋಲಿಸರು ಎಲ್ಲಾ ವಸ್ತುಗಳ ಮೇಲಿನ ಫಿಂಗರ ಪ್ರಿಂಟ್ಸಗಳನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಯಾವ ಯಾವ ವ್ಯಕ್ತಿಯ ಫಿಂಗರ ಪ್ರಿಂಟ್ಸಗಳನ್ನು ಯಾವ ಯಾವ ವಸ್ತುಗಳ ಮೇಲೆ ಇದ್ದವು ಎಂದು ಪೋಲಿಸರವರು ನನಗೆ ಹೇಳಿಲ್ಲ. ಯಾವ ಯಾವ ಬಂಗಾರ ಮತ್ತು ಹಣ ಎಲ್ಲಿದೆ ಎಂದು ಬ್ಯಾಂಕಿನ ಸಿಬ್ಬಂದಿಗೆ ಗೊತ್ತಿರುತ್ತೆ ಬೇರೆ ಯಾರಿಗೂ ಗೊತ್ತಿರುವುದಿಲ್ಲ ಎಂದರೆ ಸರಿ. ಸ್ಟ್ರಾಂಗ ರೂಮ ಹತ್ತಿರ ಹೊದರೆ ಸೈರನ ಆಗುತ್ತೆ ಎಂದರೆ ಸರಿ.

ನನಗೆ ಪೋಲಿಸರು ಎಷ್ಟು ಸಲ ಕರೆದಿದ್ದರು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಘಟನಾ ದಿನ ಎಷ್ಟು ಜನ ಪೋಲಿಸರು ಬಂದರು ಮತ್ತು ಎಷ್ಟು ಜನ ಹೊರಗಿನವರು ಬಂದರು ಎಂದರೆ ಸಾಕ್ಷಿಯು ಆ ದಿನ ಪೋಲಿಸರು ಬಂದಿದ್ದರು, ಫಿಂಗರ ಪ್ರಿಂಟ್ಸನವರು ಮತ್ತು ಡಾಗ್ಸಸಾಕ್ವಾಡ ಮತ್ತು ತನಿಖಾ ತಂಡದವರು ಬಂದಿದ್ದರು. ಮೊದಲಿಗೆ ನರೋಣಾ ಪೋಲಿಸ ಠಾಣೆಯಿಂದ ಪೇದೆಗಳು ಬಂದಿದ್ದರು. ಅವರು ಬಂದಾಗ ಸುಮಾರು 10.00 ಗಂಟೆ ಆಗಿತ್ತು. ನಂತರ ಅರ್ಧಗಂಟೆಯಾದ ಗುಲಬರ್ಗಾದಿಂದ ಪೋಲಿಸ ಉನ್ನತಾಧಿಕಾರಿಗಳು ಬಂದರು. ನಂತರ ಆಳಂದ ಸಿ.ಪಿ.ಐ ರವರು ಬಂದರು. ಕಾಗದದ ತುಕಡಿಯ ಮೇಲೆ ಅಥವಾ ಕಾಗದದ ಮೇಲೆ ಘಟನಾ ದಿನ ಪೋಲಿಸರಿಗೆ ನಾನು ಸಹಿ ಮಾಡಿಕೊಟ್ಟಿಲ್ಲ. ನಾನು ನೀಡಿದ ವರದಿಗಳ ಮೇಲೆ ನಾನು ಸಹಿ ಮಾಡಿ ಪೋಲಿಸರಿಗೆ ಕೊಟ್ಟಿದನೆ ಬೇರೆ ಯಾವ ದಾಖಲಾತಿಗಳ ಮೇಲೆ ಸಹಿಮಾಡಿ ಕೊಟ್ಟಿಲ್ಲ. ಈ ಘಟನೆಯ ಆಗಿಲ್ಲ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು 2 ನೇ ಆರೋಪಿಯನ್ನು ಠಾಣೆಯಲ್ಲಿ ನೋಡಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ನನಗೆ ತೋರಿಸಿದ ನಗದುಗಳು ಮತ್ತು ಬಂಗಾರ ಎಲ್ಲಿ ಬೇಕಾದರು ಸಿಗುತ್ತವೆ ಎಂದರೆ ಸಿಗಬಹುದು ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿಕೆಗಳು ಸುಳ್ಳು ಎಂದರೆ ಸರಿಯಲ್ಲ. ಘಟನೆಯಾದ ತಕ್ಷಣ ನಾನು ಮೊದಲು ಪೋಲಿಸರಿಗೆ ವಿಷಯ ತಿಳಿಸಿದ್ದು ನಂತರ ನನ್ನ ಮೇಲಾಧಿಕಾರಿಗಳಿಗೆ

ತಿಳಿಸಿರುತ್ತೇನೆ. ನನ್ನ ಮೇಲಾಧಿಕಾರಿಗಳು ನಂತರ ಘಟನಾ ಸ್ಥಳಕ್ಕೆ ಬಂದರು. ನನ್ನ ಮೇಲಾಧಿಕಾರಿಗಳ ಹೇಳಿಕೆಯನ್ನು ಪೋಲಿಸರು ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲು: 6 ನೇ ಆರೋಪಿ ಪರ ಎಮ.ಎಸ.ಹೆಚ. ವಕೀಲರಿಂದ:**

ನಮ್ಮ ಬ್ಯಾಂಕಿನ ಸಮಯವು ಸಾರ್ವನಿಕರಿಗಾಗಿ ಬೆಳಿಗ್ಗೆ 10.30 ರಿಂದ 5.30 ಗಂಟೆ ತನಕ ಇರುತ್ತದೆ. ಘಟನೆಕ್ಕಿಂತ ಮುಂಚಿನ ದಿನ 6.45 ರ ಸುಮಾರಿಗೆ ಬ್ಯಾಂಕು ಮುಚ್ಚುವ ಸಮಯದಲ್ಲಿ ನನ್ನ ಜೊತೆ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. ನನ್ನ ಬ್ಯಾಂಚಿನಲ್ಲಿ 20 ಲಕ್ಷಗಳವರೆಗೆ ಹಣವನ್ನು ಇಟ್ಟುಕೊಳ್ಳಲು ಪರವಾನಗಿ ಇದೆ. ಘಟನಾ ದಿನ 46 ಲಕ್ಷಗಳಷ್ಟು ಹಣ ಇತ್ತು ಆ ಹೆಚ್ಚಿನ ಹಣ ಇಟ್ಟುಕೊಳ್ಳಲು ನೀವು ಪರವಾನಗಿ ಪಡೆದಿದ್ದಿರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ವಾರಕ್ಕೊಮ್ಮೆ ಮತ್ತು ತಿಂಗಳಿಗೊಮ್ಮೆ ವರದಿ ಸಲ್ಲಿಸಿ ಹೆಚ್ಚಿನ ಹಣ ಇಟ್ಟುಕೊಳ್ಳಲು ಸಕಾರಣವನ್ನು ನೀಡಿರುತ್ತೆವೆ ಎಂದು ನುಡಿಯುತ್ತಾರೆ. ಸಕಾರಣವನ್ನು ನೀಡಿರುವ ಬಗ್ಗೆ ನಾನು ತನಿಖಾಧಿಕಾರಿಗೆ ಅಥವಾ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ.

ಬಂಗಾರ ಇಟ್ಟುಕೊಳ್ಳಲು ಅತೋರೈಜಡ ವ್ಯಾಲುವರ ಇರುತ್ತಾರೆ ಅವರಿಂದ ತೂಕಮಾಡಿಸಿ ಬ್ಯಾಂಕಿನಲ್ಲಿ ಇಡುತ್ತೆವೆ ಎಂದು ಸಾಕ್ಷಿ ನುಡಿಯುತ್ತಾರೆ. ನಮ್ಮ ಬ್ಯಾಂಕಿನ ಅತೋರೈಜಡ ವ್ಯಾಲುವರ ರವರ ಹೆಸರು ನನಗೆ ಈಗ ನೆನಪಿಲ್ಲ. ನಮ್ಮ ಬಳಿ ಇಡಲಾದ ಬಂಗಾರವು ಎಷ್ಟು ಕ್ಯಾರಟನದ್ದು ಎಂದು ನಾವು ತನಿಖಾಧಿಕಾರಿಗಳಿಗೆ ವರದಿ ಸಲ್ಲಿಸಿಲ್ಲ ನಮ್ಮ ಬ್ಯಾಂಕಿನಲ್ಲಿ ದಾಖಲಾತಿ ಇದೆ. ಈ ಘಟನೆಯ ಹಿಂದೆ ಬ್ಯಾಂಕ ಕಳ್ಳತನವಾಗಿದ್ದು ಸದರಿ ಸ್ಥಳದಲ್ಲಿಯೆ ಬ್ಯಾಂಕ ನಡೆಸಲು ನಾವು ಫೀಟನೆಸ್ಸ ಸರ್ಟಿಫಿಕೆಟ ಪಡೆದಿದ್ದೆವೆ. ಫೀಟನೆಸ್ಸ ಸರ್ಟಿಫಿಕೆಟ ಪಿ.ಡಬ್ಲ್ಯೂ.ಡಿ ಇಂಜಿನಿಯರಸ ಕೊಡುತ್ತಾರೆ. ಈ ಬಗ್ಗೆ ದಾಖಲಾತಿ ನಾವು ತನಿಖಾಧಿಕಾರಿಗೆ ಸಲ್ಲಿಸಿಲ್ಲ.

ಬೆರಳಚ್ಚು ತನಿಖಾಧಿಕಾರಿಗಳು ಯಾವುದಾದರೂ ಆರೋಪಿಗೆ ಹೊಲುವ ಬಗ್ಗೆ ಪೋಲಿಸರು ನನಗೆ ಮಾಹಿತಿ ನೀಡಿಲ್ಲ. ನಾನು ಸಿ.ಸಿ.ಟಿವಿ ಕ್ಯಾಮಾರಾವನ್ನು ಪೋಲಿಸರಿಗೆ ಸಲ್ಲಿಸಿದ್ದೆವೆ. ಚಿತ್ರಿಕರಣ ಆದ ಬಗ್ಗೆ ನಾನು ನೋಡಿ ಪೋಲಿಸರಿಗೆ ನೀಡಿದ್ದೆ. ನಾನು ಸಿ.ಪಿ.ಐ ಎಂ.ಬಿ.ನಗರ ಕಲಬುರಗಿ ರವರ ಸಮಕ್ಷಮ ದಿ.10.10.2013 ಮತ್ತು 14.11.2013 ಮತ್ತು 14.01.2014 ರಂದು ಹೇಳಿಕೆ ಕೊಟ್ಟಿರುತ್ತೆನೆ. ಅವರ ಮುಂದೆ ಹೇಳಿಕೆ ಬಿಟ್ಟು ಬೇರೆ ಯಾರ ಮುಂದೆಯು ಹೇಳಿಕೆ ಕೊಟ್ಟಿಲ್ಲ. ನನಗೆ ಸಿ.ಪಿ.ಐ ರವರು 10 ನೇ ಅಕ್ಟೊಬರನಂದು 4 ಆರೋಪಿಗಳೊಂದಿಗೆ ಬಂಗಾರ ಮತ್ತು ನಗದು ಹಣದೊಂದಿಗೆ ವಶಪಡಿಸಿಕೊಳ್ಳಲಾದ ವಸ್ತುಗಳನ್ನು ತೋರಿಸಿದ್ದರು ಮತ್ತು ದಿ14.11.2013 ರಂದು ವಾಹನಗಳನ್ನು ತೋರಿಸಿದರು. ದಿ.14.01.2014 ರಂದು ಬಂಗಾರ ಮತ್ತು ನಗದುಗಳನ್ನು ವಶಪಡಿಸಿಕೊಂಡ ಬಗ್ಗೆ ತೋರಿಸಿದರು. ಯಾವ ಸಂದರ್ಭದಲ್ಲಿ ಎಷ್ಟು ಹಣ ಮತ್ತು ಎಷ್ಟು ಬಂಗಾರ ವಶಪಡಿಸಿಕೊಂಡರು ಎಂದು ಹೇಳಲು ಬರುವುದಿಲ್ಲ. ಆ ದಿನ ವಶಪಡಿಸಿಕೊಳ್ಳಲಾದ ಬಂಗಾರವನ್ನು ವ್ಯಾಲುವೇಟರನನ್ನು ಕರೆಯಿಸಿ ಬ್ಯಾಂಕನಲ್ಲಿ ಇಟ್ಟ ಬಂಗಾರ ಪರಿಶೀಲನೆ ಮಾಡಲಾಯಿತೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಬಂಗಾರಗಳು ಆರೋಪಿಗಳು ಗಟ್ಟಿಬಂಗಾರವಾಗಿ ಬದಲಾಯಿಸಿದರು ಎಂದು ನುಡಿಯುತ್ತಾರೆ. ಸದರಿ ಕಟ್ಟಡವು ಬ್ಯಾಂಕ ನಡೆಸಲು ಯೋಗ್ಯವಾದ ಕಟ್ಟಡ ಇಲ್ಲದಿದ್ದರು ಬ್ಯಾಂಕ ನಡೆಸಿ ನಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಆರೋಪಿಗಳ ಮೇಲೆ ಸುಳ್ಳು ಪಿರ್ಯಾದಿಯನ್ನು ನೀಡಿರುತ್ತೆನೆ ಎಂದರೆ

ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹೇಳಿಕೆಗಳಲ್ಲ ಸುಳ್ಳು ಎಂದರೆ ಸರಿಯಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಆಳಂದ.